ಶ್ರೀ ಆರ್. ಎಂ. ಪಾಟೀಲ್.—ಪ್ರಶ್ನೆಗೆ ಸರಿಯಾದ ಉತ್ತರವನ್ನೇ ತರಿಸುವುದು. ನಮಗೆ ಬೇಕಾದದ್ದನ್ನು ತರಿಸಿಕೊಳ್ಳುವುದಾಗಿದ್ದರೆ ಅದು ಇಲ್ಲೇಕೆ ಬರುತ್ತಿತ್ತು?

Sri Y. MANJAYA SETTY.—May I know whether the Government is granting any subsidy to the dispensaries started by local bodies also ?

Sri R. M. PATIL.—Wherever subsidised medical practitioners' dispensaries are opened, the Government is giving grant to them.

ಶ್ರೀ ಬಿ. ಶಂಕರಪ್ಪ.—1952ರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಬೇರೆ ಯಾವ ಆಸ್ಪತ್ರೆಗಳನ್ನೂ ಕೇಳಿಲ್ಲವೇ?

ಶ್ರೀ ಆರ್. ಎಂ. ಪಾಟೀಲ್.—(b) ಪ್ರಶ್ನೆಗೆ ಸಂಬಂಧವಾಗಿ ಉತ್ತರ ಹೇಳಿದ್ದೇವೆ. ಅವರ ಪ್ರಶ್ನೆಗೆ ಉತ್ತರ ಕೊಡುವುದಾದರೆ, ಪ್ರಶ್ನೆ ಪ್ರತ್ಯೇಕವಾಗಿ ಕೇಳಿದರೆ ಅದಕ್ಕೆ ಉತ್ತರ ಹೇಳಬಹುದು.

ಶ್ರೀ ಬಿ. ಶಂಕರಪ್ಪ.—ಮಲ್ಲಾಡಿಹಳ್ಳಿಯಲ್ಲಿ ಆಸ್ಪತ್ರೆ ಪ್ರಾರಂಭವಾಗಿದೆಯಲ್ಲವೇ?

ಶ್ರೀ ಆರ್. ಎಂ. ಪಾಟೀಲ್.—ಅದು ಪ್ರಾರಂಭವಾಗಿದೆ ಎಂದು ಕೇಳಿದ್ದೇನೆ. ಅದು ಇದರಲ್ಲಿ ನಮೂದಾಗಿಲ್ಲ.

ಶ್ರೀ ಜಿ. ಶಿವಪ್ಪ.—ಒಂದು ವರ್ಷಕ್ಕೆ ಇಷ್ಟು ಆಸ್ಪತ್ರೆಗಳನ್ನು ಒಂದು ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕೆಂದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ವಿಧವಾದ ಕಾರ್ಯಕ್ರಮ ಹಾಕಿಕೊಂಡಿಲ್ಲವೇ?

ಶ್ರೀ ಆರ್. ಎಂ. ಪಾಟೀಲ್.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲಿನ ಮೈಸೂರಿಗೆ ಒಟ್ಟು 22 ಡಿಸ್ಪೆನ್ಸರಿಗಳನ್ನು ತೆಗೆಯಬೇಕೆಂದು ನಿಯಮ ಮಾಡಿಕೊಂಡಿದ್ದಾರೆ; ಅವುಗಳ ಪೈಕಿ ಮೊದಲನೆ ವರ್ಷದಲ್ಲಿ ನಾಲ್ಕು ಡಿಸ್ಪೆನ್ಸರಿ ತೆಗೆದಿದ್ದಾರೆ ಇನ್ನು ಉಳಿದ 18ನ್ನು ನಾಲ್ಕು ವರ್ಷಕ್ಕೆ spread over ಮಾಡಿದರೆ ನಾಲ್ಕು ಅಥವಾ ಐದರಂತೆ ಬರುತ್ತದೆ. ಆ ನಿಯಮವನ್ನನುಸರಿಸಿ ಈ ವರ್ಷ 57-58ಕ್ಕೆ ನಾಲ್ಕು ಡಿಸ್ಪೆನ್ಸರಿ ಕೊಡಲಾಗಿದೆ.

ಶ್ರೀ ಜಿ. ಶಿವಪ್ಪ.—ಹಳೆಯ ಮೈಸೂರಿನಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ತೆಗೆಯ ತಕ್ಕ ಆಸ್ಪತ್ರೆಗಳನ್ನು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಿರುವುದನ್ನು ಗಣನೆಗೆ ತೆಗೆದು ಕೊಂಡು average ತೆಗೆದುಕೊಂಡು ಇಷ್ಟು ಆಸ್ಪತ್ರೆ ಕೊಡಬೇಕೆಂದು ನಿಗದಿಮಾಡಿದ್ದೀರಾ ?

ಅಧ್ಯಕ್ಷರು.—ಚಿತ್ರದುರ್ಗ ಜಿಲ್ಲೆಯ ವಿಚಾರವನ್ನು ಕುರಿತು ಮಾತ್ರ ಮಾತನಾಡಿ.

ಶ್ರೀ ಜಿ. ಶಿವಪ್ಪ.—ಮಾನ್ಯ ಮಂತ್ರಿಗಳು ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ಹೇಳಿದರು, ನಾನೂ ಅದಕ್ಕೆ ಕೇಳಿದೆ.

ಅಧ್ಯಕ್ಷರು.—ನೀವು ಕೇಳಿದಿರಿ ಎಂದು ಅವರು ಹೇಳಿದರು. ಇದೇ ಪ್ರಕಾರ ಕೇಳಿದರೆ ಹೇಗೆ ?

ಶ್ರೀ ಕೆ. ಕೆಂಚಪ್ಪ.—1952ರಿಂದ ಇದುವರೆಗೂ ಈ ಪ್ರಯಾರಿಟಿ ಲಿಸ್ಟ್ ಕೊಟ್ಟಿರುವುದರಲ್ಲಿ ಹಾನಕಲ್ ಮತ್ತು ಹಡದಿ ಇವೆರಡಕ್ಕೇ ಆಸ್ಪತ್ರೆ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಆರ್. ಎಂ. ಪಾಟೀಲ್.—ಒಂದೊಂದು ಜಿಲ್ಲೆಗೆ ಎರಡರಂತೆ ಲೆಕ್ಕ ಹಾಕಿದರೆ ಸಾಧಾರಣವಾಗಿ 18 ಅಥವಾ 19 ಬರುತ್ತದೆ. ಹಳೆಯ ಮೈಸೂರಿಗೂ ಸಹ ಪ್ರಯಾರಿಟಿ ನೋಡಿಕೊಂಡು ಹಂಚಿಕೆ ಮಾಡಬೇಕಾಗುತ್ತದೆ. ನಿಮಗೇ ಬಹಳವಾಗಿ ಕೊಡಬೇಕೆಂದು ಕೇಳಿದರೆ ಎರಡನೆಯದವರಿಗೆ ಅನ್ಯಾಯವಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—52ರಿಂದ ಇದುವರೆಗೂ ವರ್ಷಕ್ಕೆ ಒಂದು ಆಸ್ಪತ್ರೆ ಕೊಟ್ಟರೂ ಸಹಿತ ಆರು ಆಸ್ಪತ್ರೆಗಳನ್ನು ಕೊಡಬೇಕಾಗಿತ್ತು. ಅಂಥಾದ್ದರಲ್ಲಿ ವರ್ಷಕ್ಕೆ ಒಂದೂಕೂಡ ಒಂದು ಡಿಸ್ಪೆನ್ಸರಿಗೆ ಬರುತ್ತಿಲ್ಲವಲ್ಲ ?

ಶ್ರೀ ಆರ್. ಎಂ. ಪಾಟೀಲ್.—ಯಾವ ತರಹ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಲಹೆ ಮಾಡಿದರೆ ಆ ಪ್ರಕಾರ ಪ್ಲಾನ್ ಪೀರಿಯಡ್ ಮುಗಿಯುವುದರೊಳಗೆ ಬಂದರೂ ಬರಬಹುದು.

ಶ್ರೀ ಕೆ. ಕೆಂಚಪ್ಪ.—ಇಷ್ಟು ಹಳ್ಳಿಗಳಿಗೆ ಒಂದು ಆಸ್ಪತ್ರೆ ಕೊಡಬೇಕು ಅಥವಾ ಇಷ್ಟು ಜನಸಂಖ್ಯೆಗೆ ಒಂದು ಆಸ್ಪತ್ರೆ ಕೊಡಬೇಕೆಂದು ನಿಯಮ ಇಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ನಿಯಮ ಎಂದು ಇಲ್ಲ. ಎಲ್ಲೆ ಈ ಆಸ್ಪತ್ರೆ ಸೌಕರ್ಯ ಇಲ್ಲವೋ ಅಲ್ಲ ಕೊಡಬೇಕೆಂದು ಇದೆ. ಅದು ಸರ್ವೇ ಸಾಧಾರಣವಾಗಿ ಅಲ್ಲಿಯ ಸ್ಥಳೀಯ ಜನರ ಕೋರಿಕೆ ಮತ್ತು ರೋಗಿಗಳ ಸಂಖ್ಯೆ, ಸಂಚಾರ ಸೌಕರ್ಯ ನೋಡಿಕೊಂಡು ಕೊಡ ಬೇಕಾಗುತ್ತದೆ. ಆ ಪ್ರಕಾರ ಕೊಡಬೇಕೆಂದು ಒಂದು ಪಟ್ಟಿ ಮಾಡಿಕೊಂಡಿದೆ, ಚಿತ್ರದುರ್ಗ ಡಿಸ್ಪೆನ್ಸರಿಗೆ ಆ ಪಟ್ಟಿಯ ಪ್ರಕಾರ ಪ್ಲಾನ್ ಪೀರಿಯಡ್‌ನಲ್ಲಿ ಇನ್ನೂ ಬರಬಹುದು.

Representation to run Government Bus from Bangalore to Hoskote.

Q.—1199. Sri T. TARE GOWDA (Sira).—

Will the Government be pleased to state :—

(*a*) whether there are representations from the public to the General Manager, State Road Transport Department, and the Government to ply a Government Road Transport bus service from Bangalore to Y. N. Hosakote in Pavagada Taluk *via* Tumkur, Kortagere, Madakasira and Pavagada ;

(*b*) If so, the steps they intend taking to start the said service with a view to facilitate the travelling public of the said places ?

A.—Sri C. M. POONACHA (Minister for Home Affairs and Industries).—

(*a*) Yes.

(*b*) The matter is under consideration.

ಶ್ರೀ ಟಿ. ತಾರೇಗೌಡ.—ಪಾವಗಡ ತಾಲ್ಲೂಕು ಹೊಸಕೋಟೆಗೆ ಒಂದು ಸರ್ಕಾರಿ ಬಸ್ ಹಾಕಬೇಕೆಂದು ಜನರು ಕೇಳಿದ್ದಾರೆಯೇ ಎಂದು ಕೇಳಿರುವುದಕ್ಕೆ 'ಹೌದು' ಎಂದು 5-9-1957ರಲ್ಲಿ ಉತ್ತರ ಕೊಡಲಾಗಿದ್ದರೂ ಸಹ ಇದುವರೆಗೂ ಒಂದು ಬಸ್ಸು ಹಾಕುವುದಕ್ಕೆ ಸರ್ಕಾರದವರಿಗೆ ಮನಸ್ಸು ಬರಲಿಲ್ಲವೇ ? ಏಕೆ ಬರಲಿಲ್ಲ ಸ್ವಾಮಿ ?

*ಶ್ರೀ ಸಿ. ಎಂ. ಪೂಣಚ್ಚ.—ಆ ಪ್ರದೇಶದಲ್ಲಿ ಸರ್ಕಾರಿ ಬಸ್ ಹಾಕಬೇಕೆಂದು ಡಿಪಾರ್ಟ್‌ಮೆಂಟ್ ನವರಿಗೆ ಉದ್ದೇಶವಿದೆ. ತನ್ಮಧ್ಯೆ ಸಾಧಾರಣ 100 ಹೊಸ ಬಸ್‌ಗಳನ್ನು ಕೊಂಡುಕೊಂಡಿದೆ. ಈ ಹೊಸ ಬಸ್‌ಗಳೆಲ್ಲವನ್ನೂ ಕೂಡ, ರಾಯಚೂರು ಡಿವಿಜನ್ನಿಗೆ ಕಳಿಸಬೇಕಾದ ಅವಶ್ಯಕತೆ ಬಂದಿದ್ದರಿಂದ ಇತರ ಕಡೆಗಳಲ್ಲಿ ಹೊಸ ಬಸ್‌ಗಳನ್ನು ಹಾಕಲಿಕ್ಕೆ ಸ್ವಲ್ಪ ಸಾವಕಾಶವಾಗಿದೆ. ಇನ್ನೂ 60 ಬಸ್ಸುಗಳನ್ನು ಕೊಂಡುಕೊಳ್ಳಲಿಕ್ಕೆ ಇಲಾಖೆಯವರ ತೀರ್ಮಾನ ಮಾಡಿದ್ದಾರೆ. ಆ ಬಸ್ಸುಗಳು ಬಂದೊಡನೆ, ಹೊಸ ಲೈನ್‌ಗಳಲ್ಲಿ ಅವಶ್ಯಕವಿರುವಂಥ ಬಸ್ಸುಗಳನ್ನು ಹಾಕುವ ಏರ್ಪಾಡನ್ನು ಖಂಡಿತವಾಗಿಯೂ ಮಾಡಲಾಗುತ್ತದೆ.

ಶ್ರೀ ಎ. ಆರ್. ಬದರೀನಾರಾಯಣ್.—ಸರ್ಕಾರದವರಿಗೆ ಬಸ್ಸುಗಳನ್ನು ಹಾಕುವುದಕ್ಕೆ ಆಗದಿದ್ದರೆ ಪ್ರೈವೇಟ್ ಓನರ್ಸ್‌ಗಾದರೂ ಕೊಡಬಹುದಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ಖಂಡಿತವಾಗಿಯೂ, ಎಲ್ಲಿ ಸರ್ಕಾರದವರಿಗೆ ಹಾಕಲಿಕ್ಕೆ ಆಗುವುದಿಲ್ಲವೋ ಅಲ್ಲಿ ಪ್ರೈವೇಟ್ ಓನರ್ಸ್ ಅವರುಗಳ ಅರ್ಜಿಗಳನ್ನು ಅನುಲಕ್ಷಿಸಿ ಅಪ್ಪಣೆ ಕೊಡಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾವಗಡ ತಾಲ್ಲೂಕು ಮೈ. ಎಚ್. ಹೊನಕೋಟೆ ಜನ ಸರ್ಕಾರದವರಿಗೂ ಮತ್ತು ಜನರಲ್ ಮ್ಯಾನೇಜರಿಗೂ ರೆಪ್ರಸೆಂಟೇಷನ್ ಕೊಡುವುದಕ್ಕೆ ಮುಂಚೆ ಸರ್ಕಾರಿ ಬಸ್‌ನ್ನು ಅಲ್ಲಿ ಒಂದು ವರ್ಷ ಏಳು ತಿಂಗಳು ನಡೆಸಿದ್ದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ನಡೆದಿರಬಹುದು. ಆದರೆ ಬೇರೆ ಇನ್ನೂ ಮುಖ್ಯವಾದಂಥ ಕೆಲವು ಮಾರ್ಗಗಳನ್ನು ತೆಗೆದುಕೊಳ್ಳುವುದಕ್ಕೆ ಆ ಕಡೆ ಬಸ್ಸುಗಳನ್ನು ಹಾಕಿ ತಾತ್ಕಾಲಿಕವಾಗಿ ಇವನ್ನು ನಿಲ್ಲಿಸಿರಬಹುದು. ಇದನ್ನು ಪುನಃ ನಡೆಸಬೇಕಾದರೆ ಹೊಸ ಬಸ್ಸುಗಳು ಬಂದೊಡನೆ ಸಾಧ್ಯವಾಗುತ್ತದೆ. ಆಗ ಬಸ್ಸುಗಳನ್ನು ಹಾಕಲಾಗುವುದು.

ಶ್ರೀ ಜಿ. ಎಚ್. ಪುಟ್ಟಣ್ಣ.—ಸರ್ಕಾರಿ ಬಸ್ಸುಗಳು ಇದ್ದಾಗ್ಯೂ ಸಾವುಕಾರಿ ಬಸ್ ಮಾಲೀಕರು ಸರ್ಕಾರಿ ಬಸ್ ಕಂಡಕ್ಟರು ಮತ್ತು ಡ್ರೈವರ್‌ಗಳಿಗೆ ಕೊಂಚ ಶಾಖಾಯ ಲವಣಾಯ ಮಾಡಿ ಸರ್ಕಾರಿ ಬಸ್ಸುಗಳಿಗೆ ಉತ್ಪನ್ನ ಇಲ್ಲದಂತೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(No answer)

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾತ್ಕಾಲಿಕವಾಗಿ ಈ ಬಸ್ಸನ್ನೂ ನಿಲ್ಲಿಸಿದೆ ಎಂದು ಹೇಳಿದಿರಿ. ಹಾಗೆ ಒಂದು ಬಸ್ಸು ನಡೆಯುತ್ತಾ ಇದ್ದು ಪ್ರೈವೇಟ್ ಓನರ್ಸ್‌ಗೂ ಕೊಡದೆ ಸರ್ಕಾರದವರೂ ನಡೆಸದಿದ್ದರೆ ಜನರಿಗೆ ಅನಾನುಕೂಲವಾಗುವುದಿಲ್ಲವೇ ?

ಅಧ್ಯಕ್ಷರು.—ತಮ್ಮ ಪ್ರಶ್ನೆಯನ್ನು ಮತ್ತೆ ಕೇಳಿ.

Sri C. K. RAJAIAH SETTY.—The Minister was pleased to say that the bus was running for one year and seven months and stopped temporarily. By such action the people would be put into trouble. Is it not so ?

ಶ್ರೀ ಸಿ. ಎಂ. ಪೂಣಚ್ಚ.—ಹಾಗೇನೂ ಇಲ್ಲ. ಬೇರೆ ಪ್ರೈವೇಟ್ ಬಸ್ ನಡೆಯುತ್ತಾ ಇದೆ.

Sri C. J. MUCKANNAPPA.—What were the valid reasons for cancelling the Bangalore-Hoskote line subsequently and putting those buses on the other routes ?

Sri C. M. POONACHA.—I have already answered that question. The valid reasons are the compelling reasons to use buses in other important sectors. Therefore, they have been temporarily diverted.

Completion of T.B.P. Main Canal Construction Works.

Q.—1274. Sri B. K. NAGUR (Bijapur).—

Will the Government be pleased to state :—

(*a*) the reason for not yet completing the Tungabhadra Project main canal construction work although the construction of the Tungabhadra dam was over two years ago ;

(*b*) whether due to this incompletion of main canal excavation work, water stored in the reservoir is not being fully utilised ;

(*c*) who are the officers responsible for the delay ?

A.—Sri H. K. VEERANNA GOWDH (Minister for Public Works).—

(*a*) The Tungabhadra Project main canal work is being done according to the programme drawn up for the purpose. The time limit prescribed for completion of the work has not been exceeded.

(*b*) Does not arise in view of reply to (*a*). The position, however, is that the waters of the reservoir are not being fully utilised at present.

(*c*) Does not arise in view of reply to (*a*).

ಶ್ರೀ ಬಿ. ಕೆ. ನಾಗೂರ್.—(a) ಪ್ರಶ್ನೆಗೆ ಉತ್ತರವಾಗಿ "ನದರಿ ಕಾಮಗಾರಿಯನ್ನು ಪೂರ್ತಿಗೊಳಿಸುವುದರ ಸಲುವಾಗಿ ತರಾಯಿಸಲಾದ ಕಾಲಾವಧಿಯು ಮಿರಿಲ್ಲ" ಎಂದು ಹೇಳಿದ್ದೀರಿ. ಕಾಲುವೆ ಕೆಲಸ ಇನ್ನೂ ಪೂರ್ತಿಯಾಗಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಸ್ವಲ್ಪ ಉತ್ತರವನ್ನು ದಯವಿಟ್ಟು ಓದಬೇಕು. ಈ ಕೆಲಸದ ಸಂಬಂಧದಲ್ಲಿ ಇಷ್ಟು ವರ್ಷಗಳಿಗೆ ಇಷ್ಟು ಕೆಲಸ ವಾಗಬೇಕೆಂದು ಒಂದು ಕಾರ್ಯಕ್ರಮ ಹಾಕಿದೆ, ಅದರ ಪ್ರಕಾರ ಕೆಲಸವಾಗುತ್ತಿದೆ. 1958ನೆಯ ಇಸವಿ ಆಖೈರಿಗೆ ಒಂದು ಲಕ್ಷ 48 ಸಾವಿರ ಎಕರೆಗಳಿಗೆ